**<u>ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ ಎಪಿಪಿ ರವರಿಂದಃ-</u>**

1. ದಿನಾಂಕ ಈಗ ನನಗೆ ನೆನಪಿಲ್ಲ. ಸುಮಾರು ಮಧ್ಯಾಹ್ನ 12-00 ಗಂಟೆ ಯಿಂದ 1-00 ಗಂಟೆವರೆಗೂ ನನ್ನ ಮತ್ತು ಇನ್ನೊಬ್ಬರ ಸಮಕ್ಷಮ ಪೊಲೀಸರು ಎಂ ಜಿ ರಸ್ತೆಯಲ್ಲಿರುವ ಅಲಂಕಾರ್ ಜ್ಯುವಲರಿ ಶಾಪ್ ನಲ್ಲಿ ಮಹಜರ್ ಕ್ರಮ ಜರುಗಿಸಿ ಒಂದು ಚಿನ್ನದ ಸರವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ-6 ಫೋಟೋದಲ್ಲಿ ಕಾಣುವ ಚಿನ್ನದ ಸರವನ್ನು ನೋಡಿ ಇದೇ ಎಂದು ಗುರುತಿಸಿರುತ್ತಾರೆ. ಘಟನಾ ಸಂಬಂಧ ನಾನು ಪೊಲೀಸರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಮಹಜರ್ ಮಾಡುವ ಕಾಲಕ್ಕೆ ಪೊಲೀಸರು ಆರೋಪಿತರನ್ನು ಸಹ ಕರೆದುಕೊಂಡು ಬಂದಿದ್ದರು. ಸದರಿ ಆರೋಪಿತರು ಈಗ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿ ನೋಡಿ ಇವರೇ ಎಂದು ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಆರ್ ಎಸ್ ವಕೀಲರಿಂದ</u>**

ತಾವು ಮಹಜರ್ ಗೆ ಎಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಚನ್ನಪಟ್ಟಣದ ಎಂ ಜಿ ರಸ್ತೆಯಲ್ಲಿರುವ ಅಲಂಕಾರ್ ಜ್ಯುವಲ್ಲರಿ ಶಾಪ್ ನಲ್ಲಿ ಎನ್ನುತ್ತಾರೆ. ಆರೋಪಿತರನ್ನು ಈ ದಿನವೇ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ, ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ